# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 306 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 19/07/2024 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯು ಮಾರುಕಟ್ಟೆ ದರಕ್ಕಿಂತ ದುಪ್ಪಟ್ಟು ದರಕ್ಕೆ ಲ್ಯಾಪ್‌ಟಾಪ್ ಖರೀದಿಸಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ; ಈ ಆಕ್ರಮಕ್ಕೆ ಕಾರಣರಾದ ಅಧಿಕಾರಿಗಳನ್ನು ಅಮಾನತ್ತು ಮಾಡಲಾಗಿದೆಯೇ; (ವಿವರ ನೀಡುವುದು) | ಕರ್ನಾಟಕ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯು ಲ್ಯಾಪ್‌ಟಾಪ್ ವಿತರಣಾ ಯೋಜನೆಯನ್ನು ಅನುಷ್ಠಾನಗೊಳಿಸುವ ಪೂರ್ವದಲ್ಲಿ ಅಂದಾಜು ದರಗಳನ್ನು ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿರುವ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ ಇವರಿಂದ ಪಡೆಯಲಾಗಿರುತ್ತದೆ. ಸದರಿ ಸಂಸ್ಥೆಯವರು ಲ್ಯಾಪ್‌ಟಾಪ್‌ನೊಂದಿಗೆ ಎಂಡಿಎಂ ಸಾಫ್ಟ್ ವೇರ್, 02 ವರ್ಷದ ವೈರಸ್ ನಿರೋಧಕ ಪ್ಯಾಕೇಜ್, ನಿಗಧಿಪಡಿಸಿದ ತರಗತಿಯ ಅನಿಮೇಟೆಡ್ ಪಠ್ಯಕ್ರಮಗಳು, ಲ್ಯಾಪ್‌ಟಾಪ್ ಬ್ಯಾಗ್, ಪೆನ್‌ಡ್ರೈವ್ ಮತ್ತು ಎರಡು ವರ್ಷದ ವಾರಂಟಿ ಪ್ಯಾಕೇಜ್ ಒದಗಿಸಲು ಒಟ್ಟು ರೂ.71,093/- ಗಳಾಗುವುದೆಂದು ಅಂದಾಜು ದರಗಳ ವಿವರಗಳನ್ನು ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ದರಗಳನ್ನು ಆಧಾರವಾಗಿಟ್ಟುಕೊಂಡು ಮಂಡಳಿಯು ಕೆಟಿಪಿಪಿ ನಿಯಮಾವಳಿಗನುಸಾರ ಇ-ಟೆಂಡರ್ ಕರೆಯಲಾಗಿರುತ್ತದೆ. ಸದರಿ ಟೆಂಡರ್ ನಲ್ಲಿ ಎಲ್1 ಆಗಿ ಆಯ್ಕೆಯಾದ ಸಂಸ್ಥೆಯು ಪ್ರತಿ ಲ್ಯಾಪ್‌ಟಾಪ್‌ಗೆ ಒಟ್ಟು ರೂ.71,046/-ಗಳನ್ನು ನಮೂದಿಸಿರುತ್ತದೆ. ಸಂಸ್ಥೆಯು ಅಂದಾಜು ದರಗಳಿಗಿಂತ ಕಡಿಮೆ ದರಗಳನ್ನು ಸಲ್ಲಿಸಿದ ಕಾರಣ ಕಾರ್ಯಾದೇಶವನ್ನು ನೀಡಿ ಲ್ಯಾಪ್‌ಟಾಪ್‌ಗಳನ್ನು ಪೂರೈಸಿಕೊಳ್ಳಲಾಗಿರುತ್ತದೆ. ಮಾರುಕಟ್ಟೆ ದರಕ್ಕಿಂತ ದುಪ್ಪಟ್ಟು ದರಕ್ಕೆ ಲ್ಯಾಪ್‌ಟಾಪ್ ಖರೀದಿಸಿರುವುದಿಲ್ಲ. ಆದಕಾರಣ, ಅಧಿಕಾರಿಗಳನ್ನು ಅಮಾನತು ಮಾಡುವ ಪ್ರಶ್ನೆ ಉದ್ಭವಿಸಿರುವುದಿಲ್ಲ. |

| | | |
|---|---|---|
| ಆ) | 7000 ಲ್ಯಾಪ್‌ಟಾಪ್‌ಗಳನ್ನು ಯಾವ ಕಾರಣಕ್ಕೆ ಖರೀದಿಸಲಾಗಿರುತ್ತದೆ; (ವಿವರ ನೀಡುವುದು) | ಕರ್ನಾಟಕ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯ ನೋಂದಾಯಿತ ಕಾರ್ಮಿಕರ ಮಕ್ಕಳ ಶಿಕ್ಷಣದ ಪಠ್ಯ ಕ್ರಮದ ಪೂರಕವಾಗಿ ವಿದ್ಯಾಭ್ಯಾಸ ಮಾಡಲು ಅನುಕೂಲವಾಗುವ ದೃಷ್ಠಿಯಲ್ಲಿ ಖರೀದಿಸಲಾಗಿದೆ. |
| ಇ) | 7000 ಲ್ಯಾಪ್‌ಟಾಪ್‌ಗಳನ್ನು ಕಾರ್ಮಿಕರ ಮಕ್ಕಳಿಗೆ ವಿತರಿಸಲು ಖರೀದಿಸಿದ್ದಲ್ಲಿ, ಯಾವ ಫಲಾನುಭವಿಗಳಿಗೆ ವಿತರಿಸಲಾಗಿದೆಯೋ ಅವರ ಆಧಾರ್ ಕಾರ್ಡ್ ವಿವರದೊಂದಿಗೆ ಸಮಗ್ರ ಮಾಹಿತಿ ನೀಡುವುದು; | ಮಂಡಳಿಯಿಂದ ಖರೀದಿಸಲಾದ 7000 ಲ್ಯಾಪ್‌ಲಾಪ್‌ಗಳನ್ನು ನೋಂದಾಯಿತ ಕಾರ್ಮಿಕರ ಮಕ್ಕಳಿಗೆ ವಿತರಣೆ ಮಾಡಿರುವ ಬಗ್ಗೆ ಸಂಬಂಧಪಟ್ಟ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತರು ಮಂಡಳಿಗೆ ವರದಿ ಸಲ್ಲಿಸಿರುತ್ತಾರೆ. ಅದರ ವಿವರಗಳನ್ನು ಸಿ ಡಿ (ನಂ.02) ಗಳಲ್ಲಿ ಲಗತ್ತಿಸಿದೆ. ಕಾರ್ಮಿಕರ ಮಕ್ಕಳಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಣೆ ಮಾಡುವ ಸಂದರ್ಭದಲ್ಲಿ ಆಧಾರ್ ಕಾರ್ಡ್ ಮಾಹಿತಿಯನ್ನು ಪಡೆಯದ ಕಾರಣ ಈ ಮಾಹಿತಿ ಇರುವುದಿಲ್ಲ. |
| ಈ) | ಈ ಹಗರಣಕ್ಕೆ ಕಾರಣರಾದವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲು ಮಾಡದಿರಲು ಕಾರಣವೇನು? (ವಿವರ ನೀಡುವುದು) | ಲ್ಯಾಪ್‌ಟಾಪ್ ಖರೀದಿ ಪ್ರಕ್ರಿಯಯು ಮಂಡಳಿ ಹಾಗೂ ಸರ್ಕಾರದ ಅನುಮೋದನೆಯನ್ವಯ ಕೆಟಿಪಿಪಿ ನಿಯಮಗಳನ್ನು ಪಾಲಿಸಿ ಖರೀದಿಸಲಾಗಿದ್ದು, ಕಾನೂನುಬದ್ಧವಾಗಿ ನಡೆದಿರುವುದು ಕಂಡುಬಂದಿರುವುದರಿಂದ ಕ್ರಿಮಿನಲ್ ಪ್ರಕರಣ ದಾಖಲು ಮಾಡುವ ಪ್ರಮೇಯ ಉದ್ಭವವಾಗಿರುವುದಿಲ್ಲ. |

**ಕಾಇ 290 ಎಲ್‌ಇಟಿ 2024**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**